## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020

ಫ್ರಾಸಾ-13

ಚಾಸಾ-26

| | | |
|---|---|---|
| ಸಾಕ್ಷಿಯ ಹೆಸರು | - | ಅಶೋಕ ಬಿ.ಎಸ್. ಪಿ |
| ತಂದೆಯ ಹೆಸರು | - | ಸಣ್ಣಪತ್ರೆಪ್ಪ |
| ವಯಸ್ಸು | - | 57 ವರ್ಷ |
| ಉದ್ಯೋಗ | - | ಪಿ ಎಸ್ ಐ , ಬೆಂಡಿಗೇರಿ ಪೋಲಿಸಠಾಣೆ |
| ವಾಸಸ್ಥಳ | - | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 10-02-2025. |

## ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈ ಹಿಂದೆ ನಾನು ಹುಬ್ಬಳ್ಳಿ ಉಪನಗರ ಪೋಲಿಸಠಾಣೆಯಲ್ಲಿ ದಿಃ 4-9-2016 ರಿಂದ 25-6-2022 ರ ವರೆಗೂ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 2-9-2020 ರಂದು ನಾನು ಠಾಣೆಯಲ್ಲಿದ್ದಾಗ ಪಿರ್ಯಾದಿಯು ಠಾಣೆಗೆ ಹಾಜರಾಗಿ ರಾತ್ರಿ 9.40 ಕ್ಕೆ ಕೊಟ್ಟ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 66/2020 ರಡಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದೂರಾದ ನಿಶಾನೆ ಪಿಃ 56 ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 56 (ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿಃ 81 ಎಂದು ಗುರುತಿಸಲಾಯಿತು. ಪಿರ್ಯಾದಿಯು ಪಂಚರು ,ಸಿಬ್ಬಂದಿ , ಆರೋಪಿ ಹಾಗೂ ಮಾಲಿನೊಂದಿಗೆ ಬಂದು ಸದರಿ ದೂರನ್ನು ಕೊಟ್ಟಿರುತ್ತಾರೆ.

3. ನಂತರ 1 ಮತ್ತು 2 ನೇ ಆರೋಪಿಗಳ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡೆನು. ದಾಳಿ ಕಾಲದಲ್ಲಿ ಹಾಜರಿದ್ದ ಚಾಸಾ–2,3,8,9,11 ರಿಂದ 20 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ಪಿರ್ಯಾದಿ ಹಾಜರುಪಡಿಸಿದ ಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ.

4. ದಿಃ 3-9-2020 ರಂದು 1 ಮತ್ತು 2 ನೇ ಆರೋಪಿಗಳನ್ನು ಬಂಧನ ಪತ್ರದೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಪಂಚನಾಮೆ ಕಾಲದಲ್ಲಿ ತೆಗೆದ ಫೋಟೊಗಳ ಬಗ್ಗೆ ಪೇದೆ ಎಮ್.ಎ ಮುಲ್ಲಾ ರವರು ಕೊಟ್ಟ ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದಡಿಯ ಪ್ರಮಾಣಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪ್ರಮಾಣಪತ್ರವನ್ನು ನಿಶಾನೆ ಪಿಃ 82 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 82 (ಎ) ಎಂದು ಗುರುತಿಸಲಾಯಿತು.

5. ನಂತರ ಪ್ರಕರಣದ ಎಲ್ಲ ಮಾಹಿತಿಯನ್ನು ನಮೂನೆ ಎಫ್ ನಲ್ಲಿ ತುಂಬಿ ಮೇಲಾಧಿಕಾರಿಗಳ ಮೂಲ ನಾರ್ಕೋಟಿಕ್ ಡ್ರಗ್ ಬ್ಯೂರೋಗೆ ಈ ಮೇಲ್ ಮೂಲಕ ಕಳುಹಿಸಿರುತ್ತೇನೆ. ಸದರಿ ನಮೂನೆ ಎಫ್ ನ ನಕಲನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿಃ 83 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 83 (ಎ) ಎಂದು ಗುರುತಿಸಲಾಯಿತು.

6. ದಿಃ 5-9-2020 ರಂದು ಆರೋಪಿತರಿಂದ ಜಪ್ತು ಮಾಡಿದ ಗಾಂಜಾದ ಪೈಕಿ ಮಾದರಿ ಗಾಂಜಾವನ್ನು ನಮ್ಮ ಠಾಣೆಯ ಸಿಬ್ಬಂದಿ ಮೂಲಕ ಮನವಿಯೊಂದಿಗೆ ರಾಸಾಯನಿಕ ಪರೀಕ್ಷೆಗಾಗಿ

ಆರ್ ಎಫ್ ಎಸ್ ಎಲ್ ಧಾರವಾಡ ಇವರಿಗೆ ಮೇಲಾಧಿಕಾರಿಯ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಕೋರಿಕೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇದನ್ನು ನಿಶಾನೆ ಪಿಃ 84 ಎಂದು ಗುರುತಿಸಲಾಯಿತು. ತಲುಪಿಸಿ ಬಂದ ಬಗ್ಗೆ ನಮ್ಮ ಸಿಬ್ಬಂದಿ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಶಾನೆ ಪಿಃ 85 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 85 (ಎ) ಎಂದು ಗುರುತಿಸಲಾಯಿತು.

7. ದಿಃ 7-9-2020 ರಂದು 1 ನೇ ಆರೋಪಿಯನ್ನು 4 ದಿನಗಳ ಕಾಲ ಪೋಲೀಸ ವಶಕ್ಕೆ ಪಡೆದುಕೊಂಡಿರುತ್ತೇವೆ. ಆ ಕಾಲದಲ್ಲಿ ಸದರಿ ಆರೋಪಿಯ ಸ್ವ-ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆ ಕಾಲದಲ್ಲಿ ಗಾಂಜಾವನ್ನು 3 ನೇ ಆರೋಪಿ ಅಬ್ದುಲ ರಜಾಕನಿಂದ ಪಡೆದುಕೊಂಡ ಬಗ್ಗೆ ತಿಳಿದು ಬಂದಿತು. ಸದರಿ ಆರೋಪಿಯು ತನ್ನ ಹೇಳಿಕೆಯಲ್ಲಿ ನನ್ನ ಮೊಬೈಲ ಪೋನನನ್ನು ನಾನು ಪಿಂಟೋ ಸರ್ಕಲ ಹತ್ತಿರ ಇರುವ ಒಂದು ಜಾಗೆಯಲ್ಲಿ ಗಿಡಗಂಟೆಗಳ ಮಧ್ಯ ಒಂದು ಪ್ಲಾಸ್ಟಿಕ ಹಾಳೆಯಲ್ಲಿ ಮುಚ್ಚಿಟ್ಟಿರುತ್ತೇನೆ ನನಗೆ ಈಗ ತಾವು ಸಂಗಡ ಕರೆದುಕೊಂಡು ಹೋದರೆ ಅದನ್ನು ತಮ್ಮ ಮುಂದೆ ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾರೆ. ಆರೋಪಿಯ ಹೇಳಿಕೆಯಲ್ಲಿರುವ ಸದರಿ ಭಾಗವನ್ನು ನಿಶಾನೆ ಪಿಃ 86 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 86 (ಎ) ಎಂದು ಗುರುತಿಸಲಾಯಿತು.

8. ದಿಃ 11-9-2020 ರಂದು ಇಬ್ಬರು ಪಂಚರಾದ ನಿಜಾಮ ಹಾಗೂ ಮನಜೂರ ಇವರುಗಳನ್ನು ಹಾಜರುಪಡಿಸಿಕೊಂಡು 1 ನೇ ಆರೋಪಿ ನಮ್ಮನ್ನು ಪಿಂಟೋ ಸರ್ಕಲ ಬಳಿ ಕರೆದುಕೊಂಡು ಹೋಗಿ ಅಲ್ಲಿದ್ದ ಗಿಡಗಂಟೆಗಳ ಮಧ್ಯ ಪ್ಲಾಸ್ಟಿಕ ಹಾಳೆಯಲ್ಲಿದ್ದ ಮೊಬೈಲ ಪೋನನ್ನು 1 ನೇ ಆರೋಪಿ ತೆಗೆದು ಹಾಜರುಪಡಿಸಿದ್ದನ್ನು ಸಂಜೆ 5 ರಿಂದ 5.45 ರ ವರೆಗೂ ಮಾಡಿದ ಮಹಜರ

ಕಾಲದಲ್ಲಿ ವಶಪಡಿಸಿಕೊಂಡಿರುತ್ತೇನೆ. ಸದರಿ ಮಹಜರಾದ ನಿಶಾನೆ ಪಿಃ 43 ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 43 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಮಾ–7 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಾಲಿನೊಂದಿಗೆ ಠಾಣೆಗೆ ಬಂದು ಮೊಬೈಲನ್ನು ಮಾಲುಪಟ್ಟಿಗೆ ಅಳವಡಿಸಿರುತ್ತೇನೆ. ಮರುದಿನ ಸದರಿ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

9. ದಿಃ 14–9–2020 ರಂದು ಧಾರವಾಡದ ಆರ್ ಎಫ್ ಎಸ್ ಎಲ್ ದಿಂದ ರಾಸಾಯನಿಕ ಪರೀಕ್ಷೆಯ ವರದಿ ಬಂದಿರುತ್ತದೆ. ಸದರಿ ವರದಿಯಾದ ನಿಶಾನೆ ಪಿಃ 79 ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 70 (ಬಿ) ಎಂದು ಗುರುತಿಸಲಾಯಿತು.

10. ದಿಃ 15–9–2020 ರಂದು 3 ನೇ ಆರೋಪಿಯ ಇರುವಿಕೆಯ ಬಗ್ಗೆ ಮಾಹಿತಿ ಬಂದಿದ್ದು ನನ್ನ ಮೇಲಾಧಿಕಾರಿಗೆ ಮಾಹಿತಿ ನೀಡಿ ದಾಳಿಗೆ ಅನುಮತಿ ಪಡೆದೆನು. ಪಂಚರನ್ನು ಕರೆ ತರುವಂತೆ ಪೇದೆ–12 ದನಿಗೊಂಡ ರವರನ್ನು ಕಳುಹಿಸಿದ್ದು ಅವರು ಇಬ್ಬರು ಪಂಚರನ್ನು ಕರೆತಂದರು. ಅವರುಗಳೆಂದರೆ ಮಹಮ್ಮದ ಇಸ್ಮಾಯಿಲ್ ದುಕಾನದಾರ ಹಾಗೂ ಚಂದ್ರಕಾಂತ ಯಮನಪ್ಪ ಕಿರೇಸೂರ ಆಗಿದ್ದರು. ದಿಃ 15–9–2020 ರ ಜ್ಞಾಪನಾ ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಜ್ಞಾಪನ ಪತ್ರವನ್ನು ನಿಶಾನೆ ಪಿಃ 87 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 87 (ಎ) ಎಂದು ಗುರುತಿಸಲಾಯಿತು. ಪಂಚರಿಗೆ ಈ ಪ್ರಕರಣದ ಮಾಹಿತಿ ನೀಡಿ ಪಂಚರಾಗುವಂತೆ ಕೋರಿಕೊಂಡ ಮೇರೆಗೆ ಅವರುಗಳು ಅದಕ್ಕೆ ಒಪ್ಪಿದರು. ಚಂದ್ರಕಾಂತ ಯಮನಪ್ಪ ಕಿರೇಸೂರ ರವರಿಗೆ ಕೊಟ್ಟ ನೋಟೀಸನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ

ನೋಟೀಸನ್ನು ನಿಶಾನೆ ಪಿಃ 88 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 88 (ಎ) ಎಂದು ಗುರುತಿಸಲಾಯಿತು. ಮತ್ತೊಂದು ನೋಟೀಸಾದ ನಿಶಾನೆ ಪಿಃ 58 ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 58 (ಬಿ) ಎಂದು ಗುರುತಿಸಲಾಯಿತು.

11. ದಿಃ 15-9-2020 ರಂದು ತೂಕ ಮಾಡುವ ವ್ಯಕಿಯನ್ನು ಸಿಬ್ಬಂದಿ ಮೂಲಕ ಕರೆಸಿರುತ್ತೇನೆ. ಸದರಿ ವ್ಯಕ್ತಿಗೆ ಕೊಟ್ಟ ನೋಟೀಸನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ನೋಟೀಸನ್ನು ನಿಶಾನೆ ಪಿಃ 89 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 89 (ಎ) ಎಂದು ಗುರುತಿಸಲಾಯಿತು. ತೂಕ ಮಾಡುವವರನ್ನು ಕರೆದುಕೊಂಡು ಬರಲು ಸಿಬ್ಬಂದಿಗೆ ಕೊಟ್ಟ ಜ್ಞಾಪನಾ ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಜ್ಞಾಪಾನ ಪತ್ರವನ್ನು ನಿಶಾನೆ ಪಿಃ 90 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 90 (ಎ) ಎಂದು ಗುರುತಿಸಲಾಯಿತು. ದಾಳಿ ಮಾಡಲು ಅನುಮತಿ ಕೋರಿದ ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಪತ್ರವನ್ನು ನಿಶಾನೆ ಪಿಃ 91 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 91 (ಎ) ಎಂದು ಗುರುತಿಸಲಾಯಿತು. ಮೇಲಾಧಿಕಾರಿ ಕೊಟ್ಟ ಅನುಮತಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇದನ್ನು ನಿಶಾನೆ ಪಿಃ 92 ಎಂದು ಗುರುತಿಸಲಾಯಿತು.

12. ದಿಃ 15-9-2020 ರಂದು ಬೆಳಿಗ್ಗೆ 7 ಘಂಟೆ ಹೊತ್ತಿಗೆ ಒಂದು ಟವೇರಾ ವಾಹನ ಸಂಖ್ಯೆ ಕೆಎ-25-ಎಎ-1513 ವಾಹನದಲ್ಲಿ ಪಂಚರು, ತೂಕ ಮಾಡುವ ವ್ಯಕ್ತಿ , ನಮ್ಮ ಸಿಬ್ಬಂದಿ ಹಾಗೂ ತೂಕ ಮಾಡುವ ಯಂತ್ರದೊಂದಿಗೆ ಮುಖ್ಯ ಪೇದೆ ದನಿಗೊಂಡ ರವರಿಂದ ಸದರಿ ವಾಹನವನ್ನು ಚಲಾಯಿಸಿಕೊಂಡು ಎನ್ ಎಚ್-50 ಹುಬ್ಬಳ್ಳಿ ಸೊಲ್ಲಾಪೂರ ಮುಖ್ಯ ರಸ್ತೆಗೆ ಹೋದೆವು. ಮುಖ್ಯ ರಸ್ತೆಯಲ್ಲಿರುವ ಗದ್ದನ ಕೇರಿ ಕ್ರಾಸ ಹತ್ತಿರದ ಸೀಮಿಕೇರಿ ಕಾವಮ್ಮ ದೇವಸ್ಥಾನದ ಬಳಿ ಹೋದೆವು. ಆಗ ಸಮಯ ಬೆಳಿಗ್ಗೆ 10.10 ಗಂಟೆ ಆಗಿತ್ತು. ಸದರಿ ದೇವಸ್ಥಾನ ಗದ್ದನಕೇರಿ ಕ್ರಾಸದಿಂದ ಕುಳಗೇರಿ ಕ್ರಾಸ

ರಸ್ತೆಯಲ್ಲಿ 2 ಕಿ ಮೀ ದೂರದಲ್ಲಿದ್ದಿತು. ನಾವು ಮರೆಯಲ್ಲಿ ನಿಂತು ನೋಡುತ್ತಿದ್ದಾಗ ಮಾಹಿತಿಯಲ್ಲಿದ್ದ ಎಮ್ ಎಚ್ 11 ಎ ಎಂ 2314 ವಾಹನವು ಮಧ್ಯಾಹ್ನ 12.40 ಕ್ಕೆ ಗದ್ದನಕೇರಿ ಕ್ರಾಸ ಕಡೆಯಿಂದ ಬಂದಿತು. ಅದು ವೋಕ್ಸ ವ್ಯಾಗನ್ ಕಂಪನಿಯ ಕಾರು ಆಗಿತ್ತು. ನಾವು ಎರಡೂ ಕಡೆಗಳಿಂದ ದಾರಿಗೆ ಅಡ್ಡಲಾಗಿ ನಿಂತುಕೊಂಡಾಗ ಸದರಿ ವಾಹನದ ಚಾಲಕ ತನ್ನ ವಾಹನದ ವೇಗಳನ್ನು ಕಡಿಮೆ ಮಾಡಿದನು.ನಮ್ಮಗಳನ್ನು ನೋಡಿ ಸದರಿ ವಾಹನದ ಚಾಲಕ ಕಾರನ್ನು ನಿಲ್ಲಿಸಿ ಸದರಿ ಸ್ಥಳದಿಂದ ಓಡಿ ಹೋಗಲು ಪ್ರಾರಂಭಿಸಿದನು. ಕೂಡಲೇ ನಮ್ಮ ಸಿಬ್ಬಂದಿಗಳು ಹೋಗಿ ಸದರಿ ವ್ಯಕ್ತಿಯನ್ನು ಹಿಡಿದುಕೊಂಡರು . ಅಗ ಸಮಯ ಮಧ್ಯಾಹ್ನ 12.45 ಆಗಿತ್ತು. ಆಗ ನಾವು ಅವನ ಹತ್ತಿರ ಹೋಗಿ ಅವನ ಹೆಸರು ಕೇಳಿದಾಗ ಅವನು ತನ್ನ ಹೆಸರು ಮಹಮ್ಮದ ಅಬ್ದುಲ ರಜಾಕ ಎಂದು ಸಾಂಗ್ಲಿ ವಾಸಿ ಎಂದು ಹೇಳಿದನು. ಸದರಿ ವಾಹನದ ನೊಂದಾವಣೆ ಸಂಖ್ಯೆಯನ್ನು ತಪಾಸಣೆ ಮಾಡಿದಾಗ ಅದರ ನೊಂದಾವಣೆ ಸಂಖ್ಯೆ ಎಮ್ ಎಚ್ 11 ಎ ಎಮ್ 2345 ಆಗಿತ್ತು. ಸದರಿ ಕಾರಿನ ಚಾಲಕನಿಗೆ ಕಾರಿನ ಡಿಕ್ಕಿಯನ್ನು ತೆಗೆಯುವಂತೆ ಹೇಳಿದಾಗ ಆತ ಕಾರಿನ ಡಿಕ್ಕಿಯನ್ನು ತೆರೆದಾಗ ಅದರಿಂದ ಘಾಟು ವಾಸನೆ ಬಂದಿತು.ಅಲ್ಲಿದ್ದ ಒಂದು ಬಂಡಲ್ ನ್ನು ಸದರಿ ಕಾರಿನ ಚಾಲಕ ತೆಗೆದುಕೊಟ್ಟನು. ಪಂಚರ ಸಮಕ್ಷಮ ಸದರಿ ಬಂಡಲನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾದ ಎಲೆ ಮತ್ತು ಬೀಜ ಇದ್ದವು. ನಂತರ ಸದರಿ ಕಾರ ಚಾಲಕನ ವಿಚಾರಣೆ ಮಾಡಿದೆವು. ಸದರಿ ಗಾಂಜಾವನ್ನು ಚಾಸಾ-10 ರವರಿಂದ ತೂಕ ಮಾಡಿಸಿ ನೋಡಲಾಗಿ ಅದರ ತೂಕ 1 ಕೆಜಿ 10 ಗ್ರಾಂ ಇದ್ದಿತು. ಸದರಿ ಆರೋಪಿ ಹಾಜರುಪಡಿಸಿದ ನಗದು 1500 ರೂಗಳನ್ನು ಒಂದು ಬಿಳಿ ಬಣ್ಣದ ಸಾಮಸಂಗ್ ಫೋನನ್ನು , ಬಿಳಿ ಬಣ್ಣದ ವೋಕ್ಸ ವ್ಯಾಗನ್ ಕಾರನ್ನು ವಶಪಡಿಸಿಕೊಳ್ಳಲಾಯಿತು. ದೊರೆತ ಗಾಂಜಾದ ಪೈಕಿ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ಪ್ರತ್ಯೇಕವಾಗಿ ಪ್ಯಾಕ ಮಾಡಿ ಸೀಲು ಮಾಡಲಾಯಿತು. ವಶಪಡಿಸಿಕೊಂಡ ವಸ್ತುಗಳ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ವಶಪಡಿಸಿಕೊಂಡ ಎಲ್ಲ ವಸ್ತುಗಳನ್ನು ( ಕಾರನ್ನು ಹೊರತುಪಡಿಸಿ) ಪ್ರತ್ಯೇಕವಾಗಿ ಪ್ಯಾಕ ಮಾಡಿ ಸೀಲು ಮಾಡಲಾಯಿತು. ಮಾದರಿ ಗಾಂಜಾವನ್ನು ಎಸ್-1

ಎಂದು ಉಳಿದ ಗಾಂಜಾವನ್ನು ಆರ್–1 ಎಂದು ಗುರುತು ಮಾಡಲಾಯಿತು. ಆರೋಪಿಯ ಮೇಲೆ ದಸ್ತಗಿರಿ ಕ್ರಮ ಜರುಗಿಸಲಾಯಿತು. ಸದರಿ ಸ್ಥಳದಲ್ಲಿ ಮಧ್ಯಾಹ್ನ 12 ರಿಂದ 3 ಘಂಟೆ ವರೆಗೂ ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಲಾಯಿತು. ಸದರಿ ಮಹಜರಾದ ನಿಶಾನೆ ಪಿಃ 59 ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 59 (ಇ ) ಎಂದು ಗುರುತಿಸಲಾಯಿತು. ಸೀಲನ್ನು ಪಂಚರಾದ ಮಹಮ್ಮದ ದುಕಾನದಾರ ರವರ ವಶಕ್ಕೆ ಕೊಡಲಾಯಿತು. ಸದರಿ ಮಹಜರ ಕಾಲದಲ್ಲಿ ಫೋಟೊಗಳನ್ನು ತೆಗೆಸಲಾಯಿತು. ಸದರಿ ಫೋಟೊಗಳಾದ ನಿಶಾನೆ ಪಿಃ 60 ರಿಂದ 73 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

13. ಸದರಿ ಫೋಟೊಗಳಲ್ಲಿರುವ ಕಾರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಠಾಣೆಗೆ ಬಂದು ಸಿಬ್ಬಂದಿಗಳಾದ ಚಾಸಾ–11, 12,13 ಹಾಗೂ ಬೀರಣ್ಣನವರ, ರೇಣು ಸಿಕ್ಕಲಗಾರ ಇವರುಗಳ ಹೇಳಿಕೆಗಳನ್ನು ದಾಖಲೆ ಮಾಡಿಕೊಂಡಿರುತ್ತೇನೆ. ವಶಪಡಿಸಿಕೊಂಡ ಮಾಲನ್ನು ಮಾಲುಪಟ್ಟಿಗೆ ಅಳವಡಿಸಿ ನ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ.

14. ದಿಃ 16–9–2020 ರಂದು 3 ನೇ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿಯ ಮುಾಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಚಾಸಾ–14 ರವರು ಕೊಟ್ಟ ಕಲಂ 65 ಬಿ ಸಾಕ್ಷ ಅಧಿನಿಯಮದಡಿಯ ಪ್ರಮಾಣಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಪ್ರಮಾಣಪತ್ರವನ್ನು 93 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 93(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾದರಿ ಗಾಂಜಾವನ್ನು ಸಿಬ್ಬಂದಿಯ ಮೂಲಕ ಆರ್ ಎಫ್ ಎಸ್ ಎಲ್ ಧಾರವಾಡಕ್ಕೆ ಕಳುಹಿಸಿದ್ದು ಆ ಬಗ್ಗೆ ಸದರಿ ಸಿಬ್ಬಂದಿ ಕೊಟ್ಟ ಸ್ವೀಕೃತಿ ಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು

ಹಾಗೂ ಅದರಲ್ಲಿದ್ದ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಶಾನೆ ಪಿಃ 94 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 94 (ಎ) ಎಂದು ಗುರುತಿಸಲಾಯಿತು.

15. ದಿಃ 19-9-2020 ರಂದು ಇನವೆಂಟರಿ ಮಾಡಿಕೊಡುವಂತೆ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ದಿಃ20-10-2020 ರಂದು ಸದರಿ ಗಾಂಜಾದ ಇನವೆಂಟರಿ ಮಾಡಿಸಲಾಯಿತು. ಆ ಬಗ್ಗೆ ಕೊಟ್ಟ ಆರ್ಡರ ಶೀಟನ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇದನ್ನು ನಿಶಾನೆ ಪಿಃ 95 ಎಂದು ಗುರುತಿಸಲಾಯಿತು. ಆ ಬಗ್ಗೆ ಕೊಟ್ಟ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪ್ರಮಾಣಪತ್ರವನ್ನು ನಿಶಾನೆ ಪಿಃ 96 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 96 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುಮಾ-1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**( ಬಿ. ಜಿ. ರಮಾ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಗೆ ದಿಃ 9-7-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

16. ದಿಃ 9-10-2020 ರಂದು 3 ನೇ ಆರೋಪಿ ಅಬ್ದುಲರಜಾಕ ಈತನಿಗೆ ಗಾಂಜಾ ನೀಡುತ್ತಿದ್ದ ಆರೋಪಿ ಚಂದ್ರಕಾಂತ ಅಲಿಯಾಸ್ ಪಕ್ರು ತಂದೆ ಹರಿಶ್ಚಂದ್ರ ಚವ್ಹಾಣ ಈತನು ಬೆಂಗಳೂರಿನ ಶೇಷಾದ್ರಿಪುರಮ ಪೋಲಿಸಠಾಣೆ ಗುನ್ನಾ ಸಂಃ 57/2020 ರಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದು ಬಾಡಿ ವಾರಂಟಗಾಗಿ ವಿನಂತಿ ಮಾಡಿಕೊಂಡಿರುತ್ತೇನೆ. ದಿಃ 20-10-2020 ರಂದು ಸದರ ಪ್ರಕರಣದ ಆರೋಪಿತರ ತಾಬಾದಲ್ಲಿ ಸ್ಯಾಂಪಲ ಕುರಿತು ಉಳಿದ ಎಲ್ಲ ಗಾಂಜಾ ಇನವೆಂಟರಿ ಮಾಡಿಸಿ ಆ ಸಮಯದಲ್ಲಿ ಫೋಟೊ ತೆಗೆಸಿದ್ದೇನೆ. ಒಟ್ಟು 16 ಫೋಟೊಗಳು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಆ ಫೋಟೊಗಳನ್ನು ನಿಶಾನೆ ಪಿಃ 97 ರಿಂದ 112 ಎಂದು ಕ್ರಮವಾಗಿ ಗುರುತಿಸಲಾಯಿತು. ದಿ 23-10-2020 ರಂದು ಪಿ ಸಿ 2492 ಉಮೇಶ ರವರು ಆರ್ ಎಫ್ ಎಸ್ ಎಲ್ ಧಾರವಾಡದಿಂದ ಗಾಂಜಾ ಪ್ರಮಾಣಪತ್ರ ಅಂದರೆ ಎಫ್ ಎಸ್ ಎಲ್ ವರದಿ ತಂದು ಹಾಜರುಪಡಿಸಿದ್ದು ಅದನ್ನು ಕಡತದಲ್ಲಿ ಅಳವಡಿಸಿರುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಶಾನೆ ಪಿಃ 79 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 79 ಬಿ ಎಂದು ಗುರುತಿಸಲಾಯಿತು. ( ಮುಖ್ಯ ವಿಚಾರಣೆಯ ಪ್ಯಾರಾ 9 ರಲ್ಲಿ ಈಗಾಗಲೇ ಸಾಕ್ಷಿ ಈ ವಿಚಾರ ಹೇಳಿದ್ದು ಆದರೆ ಟೈಪ ಮಾಡುವಾಗ 79 (ಬಿ) ಬದಲು 70 (ಬಿ) ಎಂದು ಟೈಪ ಮಾಡಲಾಗಿದ್ದು ಅದನ್ನು ಕೂಡ ತಿದ್ದುಪಡಿ ಮಾಡಲಾಗಿದೆ. ದಿಃ 27-10-2020 ರಂದು ಮಾನ್ಯ ಸಹಾಯಕ ಇಂಜನೀಯರ ಪಿ ಡಬ್ಲು ಡಿ ಹುಬ್ಬಳ್ಳಿ ರವರಿಗೆ ಗುನ್ನಾ ಜಾಗದ ಹಾತ ನಕಾಶೆಗಾಗಿ ಕೋರಿಕೊಂಡಿರುತ್ತೇನೆ. ದಿಃ 29-10-2020 ರಂದು ಮಾರುತಿ ಹರಿಣಶಿಕಾರಿ , ಚಂದಪ್ಪ ಹರಿಣಶಿಕಾರಿ ಮತ್ತು ಅಬ್ದುಲರಜಾಕ ( 1 ರಿಂದ 3 ನೇ ಆರೋಪಿ ) ಇವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಆಗ ನಾನು ಎಸ್ ಎಚ್ ಡಿ ಕೂಡ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸಾಕ್ಷಿ ಆ ಎರಡೂ

ಎಸ್ ಎಚ್ ಡಿ ಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಶಾನೆ ಪಿಃ 113 ಮತ್ತು 114 ಎಂದು ಕ್ರಮವಾಗಿ ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಗಳನ್ನು ನಿಶಾನೆ ಪಿಃ 113( ಎ) ಮತ್ತು 114 (ಎ) ಎಂದು ಕ್ರಮವಾಗಿ ಗುರುತಿಸಲಾಗಿದೆ. ನಮಗೆ ಸಿಕ್ಕ ಗಾಂಜಾ ಬಗ್ಗೆ ಫಾರ್ಮ ಎಫ್ ಮೊದಲೇ ಕಳುಹಿಸಿರುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಶಾನೆ ಪಿಃ 83 ಎಂದು ಗುರುತಿಸಲಾಗಿದೆ.

17. ದಿಃ 15-9- 2020 ರಂದು ವಶಪಡಿಸಿಕೊಂಡ ಗಾಂಜಾ ಅಲ್ಲದೇ ಬೇರೆ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅದರಲ್ಲಿ 1500 ರೂ ಈಗಾಗಲೇ ಮುಮಾ-10 ಎಂದು , ಅದೇರೀತಿ ಒಂದು ಸ್ಯಾಮಸಂಗ್ ಮೊಬೈಲ ಮುಮಾ-9 ಎಂದು ಗುರುತಿಸಲಾಗಿದೆ . ಸಾಕ್ಷಿ ಆದಿನ ವಶಪಡಿಸಿಕೊಂಡ ಕಾರಿನ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಶಾನೆ ಪಿಃ 60 ರಿಂದ 73 ಎಂದು ಗುರುತಿಸಲಾಗಿದೆ. 1 ಮತ್ತು 2 ನೇ ಆರೋಪಿ ಕಡೆಯಿಂದ ವಶಪಡಿಸಿಕೊಂಡ ಬೈಕು , ರೆಡ್ ಮಿ ಕಂಪನಿಯ ಮೊಬೈಲ, ಹಳದಿಬಣ್ಣದ ಕ್ಯಾರಿಬ್ಯಾಗ .,ಕಪ್ಪು ಬಣ್ಣದ ಬ್ಯಾಗ , ರೂ1000 ನೋಡಿದರೆ ಗುರುತಿಸುಬಲ್ಲೆ. ರೂ1000 ಈಗಾಗಲೇ ಮುಮಾ-6 ಎಂದು , ಹಳದಿ ಬಣ್ಣದ ಕ್ಯಾರಿಬ್ಯಾಗ ಮುಮಾ-5 ಎಂದು , ರೆಡ್ ಮಿ ಮೊಬೈಲ ಈಗಾಗಲೇ ಮುಮಾ-7 ಎಂದು , ಕಪ್ಪು ಬಣ್ಣದ ಕಾಲೇಜ ಬ್ಯಾಗ ಮುಮಾ-4 ಎಂದು ಗುರುತಿಸಲಾಗಿದೆ. ಸಾಕ್ಷಿ ಆ ಬೈಕ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಶಾನೆ ಪಿಃ 38 ರಿಂದ 41 ಎಂದು ಗುರುತಿಸಲಾಯಿತು.

18. ದಿಃ 24-12-2020 ರಂದು 4 ನೇ ಆರೋಪಿ ಚಂದ್ರಕಾಂತ ಚವ್ಹಾಣ ಈತನನ್ನು ನ್ಯಾಯಾಲಯದಿಂದ 5 ದಿನಕ್ಕೆ ಕಸ್ಟಡಿಗೆ ತೆಗೆದುಕೊಂಡು ತನಿಖೆ ಮಾಡಿರುತ್ತೇನೆ. ದಿಃ 25-12-2020 ರಂದು ಮಾರನೇ ದಿನ ಇಬ್ಬರು ಪಂಚರಾದ ಸಂಗಮೇ ಪಕ್ಕೀರಪ್ಪ ಸವದಿ , ರಘುನಾಥ ಪಕ್ಕೀರಪ್ಪ ಕಮತರ ಇವರ ಸಮಕ್ಷಮ 3 ನೇ ಆರೋಪಿತನಿಗೆ 4 ನೇ ಆರೋಪಿತನು ಗಾಂಜಾ ತಂದು ಕೊಡುತ್ತಿದ್ದ

ಗುಲಬರ್ಗಾ ಹೈವೆ ಜಾಗದಲ್ಲಿ 4 ನೇ ಆರೋಪಿತನು ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಫೋಟೊ ತೆಗೆದು ಪಂಚನಾಮೆ ಮಾಡಿರುತ್ತೇನೆ. ಆ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಆ ದಿನ ಮಾಡಿದ ಪಂಚನಾಮೆ ನೋಡಿದರೆ ಗುರುತಿಸಬಲ್ಲೆ . ಸಾಕ್ಷಿ ಆ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಶಾನೆ ಪಿಃ 75 ಎಂದು ಗುರುತಿಸಾಗಿದೆ. ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 75 (ಬಿ ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೊಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಶಾನೆ ಪಿಃ 76 ಮತ್ತು 77 ಎಂದು ಗುರುತಿಸಲಾಗಿದೆ. ಆ ಪಂಚನಾಮೆಯನ್ನು ಬೆಳಿಗ್ಗೆ 11 ಘಂಟೆಯಿಂದ 11.45 ಘಂಟೆ ನಡುವೆ ಜರುಗಿಸಿರುತ್ತೇನೆ. ನಂತರ ವಾಪಸು ಠಾಣೆಗೆ ಬಂದು ಸಿಬ್ಬಂದಿಗಳಾದ ಎಚ್ ಸಿ 1563 ಎಚ್ ಸಿ ಪಾಂಡೆ , 1628 ಎಂ ಬಿ ದನಿಗೊಂಡ , 1676 ಎಂ ವಾಯ್ ಅಂಗಡಿ , ಸಿಪಿಸಿ 2300 , ಸಿಪಿಸಿ 3030 ,ಸಿಪಿಸಿ 2717 ಹಾಗೂ ರಮೇಶ ಫಕ್ಕೀರಪ್ಪ ಅಮ್ಮಿನಬಾವಿ , ಚಂದ್ರಕಾಂತ ಯಮನಪ್ಪ ಕಿರೇಸೂರ , ಮಹಮ್ಮದ ಇಸ್ಮಾಯಿಲ್ ದುಕಾನದಾರ ರವರಿಗೆ 4 ನೇ ಆರೋಪಿ ಚಂದ್ರಕಾಂತನನ್ನು ತೋರಿಸಿ ಪುನಃ ಹೇಳಿಕೆಗಳನ್ನು ಪಡೆದುಕೊಂಡೆನು. ಮಹಮ್ಮದ ಇಸ್ಮಾಯಿಲ ದುಕಾನದಾರ ರವರು ನನ್ನ ಮುಂದೆ ನಿಶಾನೆ ಪಿಃ 74 ರಂತೆ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಸ್ವಯಂ ಹೇಳಿಕೆಯನ್ನು ದಾಖಲು ಮಾಡಿಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ಅವನನ್ನು ಮಾರನೇ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ 3-2-2021 ರಂದು ಪಿ ಡಬ್ಲು ಡಿ ಹುಬ್ಬಳ್ಳಿ ರವರು ಗುನ್ಹಾ ಜಾಗೆಯ ಹಾತನಕಾಶೆಯನ್ನು ನೀಡಿರುತ್ತಾರೆ. ಸಾಕ್ಷಿ ಆ ನಕ್ಷೆ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 115 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ನಿಶಾನೆ ಪಿಃ 78 ಹೆಸ್ಕಾಂ ವರದಿ ನಾನು ದಿಃ 14-10-21 ರಲ್ಲಿ ಪಡೆದುಕೊಂಡಿರುತ್ತೇನೆ. ಸಾಕ್ಷಿ ಅದರಲ್ಲಿರುವ ತನ್ನ ಸಹಿ ಗುರುತಿಸಿದ್ದು ಅದನ್ನು ನಿಶಾನೆ ಪಿಃ 78 (ಬಿ) ಎಂದು ಗುರುತಿಸಲಾಯಿತು.

19. 3 ನೇ ಆರೋಪಿಯಿಂದ ವಶಪಡಿಸಿಕೊಂಡ ಸ್ಯಾಂಪಲನ್ನು ಎಫ ಎಸ್ ಎಲ್ ಗೆ ಕಳುಹಿಸಿದ್ದೇನೆ. ಅದರ ವರದಿಯನ್ನು ದಿಃ 23-10-2020 ರಂದು ಪಡೆದುಕೊಂಡಿರುತ್ತೇನೆ. ಸಾಕ್ಷಿ ಆ ವರದಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 80 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 80(ಬಿ) ಎಂದು ಗುರುತಿಸಲಾಯಿತು. 3 ನೇ ಆರೋಪಿಯಿಂದ ವಶಪಡಿಸಿಕೊಂಡ ವಸ್ತುವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ಮುಮಾ-8 ಎಂದು ಗುರುತಿಸಲಾಗಿದೆ. ದಿಃ 11-9-2021 ರಂದು 915010030107054 ಮತ್ತು 919010013779845 ರ ಬ್ಯಾಂಕ ಸ್ಟೇಟಮೆಂಟ ನೀಡಲು ಎಕ್ಸಿಸ್ ಬ್ಯಾಂಕ ಹುಬ್ಬಳ್ಳಿ ಬ್ರಾಂಚ್‌ಗೆ ಮನವಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಆ ದಾಖಲೆಯನ್ನು ನಿಶಾನೆ ಪಿಃ 116 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 116 (ಎ) ಎಂದು ಗುರುತಿಸಲಾಯಿತು. ಎಕ್ಸಿಸ್ ಬ್ಯಾಂಕನವರು ಅವರೆಡೂ ಅಕೌಂಟಗಳ ಬಾಂಕ ಸ್ಟೇಟಮೆಂಟ ನೀಡಿರುತ್ತಾರೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ನಿಶಾನೆ ಪಿಃ 117 ಮತ್ತು 118 ಎಂದು ಗುರುತಿಸಲಾಯಿತು. 915010030107054 ಅಕೌಂಟ ಬಲಭೀಮ ಎನ್ನುವವರದಾಗಿದ್ದು, ಅದೇರೀತಿ 919010013779845 ಅಕೌಂಟ ನಂಬರ ಆರೋಪಿ ಚಂದ್ರಕಾಂತ ಗೆ ಸೇರಿದ್ದಾಗಿರುತ್ತದೆ. ಗಾಂಜಾ ತೆಗೆದುಕೊಳ್ಳಲು ಆರೋಪಿ -3 ಅಬ್ದುಲ ರಜಾಕ ರವರು ಬೇರೆ ಬೇರೆ ಹೆಸರಿನಿಂದ ಈ ಎರಡೂ ಅಕೌಂಟಗೆ ದುಡ್ಡು ಹಾಕುತ್ತಿದ್ದರು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು). ಓ. ಹೇ. ಕೇ. ಸರಿ ಇದೆ.

**( ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಗೆ ಪುನಃ ಅಪರಾಹ್ನ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

20. 4 ನೇ ಆರೋಪಿ ಫೋಟೊ ಮತ್ತು ಅವರ ಬ್ಯಾಂಕ ಡಿಟೇಲ ವರದಿ ಕೊಟ್ಟಿರುತ್ತಾರೆ. ಬ್ಯಾಂಕ ಡಿಟೇಲ ವರದಿಯನ್ನು ನಿಶಾನೆ ಪಿಃ 119 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 119 (ಎ) ಎಂದು ಗುರುತಿಸಲಾಯಿತು. ಅದೇರೀತಿ ಬಲಭೀಮಗೆ ಸಂಬಂದಪಟ್ಟ ವರದಿಯನ್ನು ಎಕ್ಸಿಸ್ ಬ್ಯಾಂಕನವರು ನೀಡಿರುತ್ತಾರೆ. ಸಾಕ್ಷಿ ಆ ದಾಖಲೆ ನೋಡಿ ಗುರುತಿಸಿರುತ್ತಾರೆ. ಆ ದಾಖಲೆಯನ್ನು ನಿಶಾನೆ ಪಿಃ 120 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 120 (ಎ) ಎಂದು ಗುರುತಿಸಲಾಯಿತು.

21. ದಿಃ 14-10-2021 ರಂದು ಹೆಸ್ಕಾಂ ಹುಬ್ಬಳ್ಳಿರವರು ದಿಃ 2-9-2020 ರಂದು ಸಂಜೆ 6 ಘಂಟೆಯಿಂದ ರಾತ್ರಿ 8 ಘಂಟೆ ವರೆಗೆ ಅಸೆನ್ಸನ್ ಚರ್ಚ ಹತ್ತಿರ ಇರುವ ಕಚ್ಚಾ ರಸ್ತೆಯಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ಕೇಳಿದ್ದು ಅವರು ಆ ಅವಧಿಯಲ್ಲಿ ಯಾವುದೇ ವಿದ್ಯುತ್ ವ್ಯತ್ಯಯ ಕುರಿತು ಫ್ಯೂಜ್ ಆಫ ಕಾಲ್ ರಜಿಸ್ಟರನಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸಾಕ್ಷಿ ಆ ವರದಿ ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಶಾನೆ ಪಿಃ 78 ಎಂದು ಗುರುತಿಸಲಾಗಿದೆ. ಅದೇ ದಿನ 4 ನೇ ಆರೋಪಿ ಚಂದ್ರಕಾಂತ ಚವ್ವಾಣ ಈತನ ವಿರುದ್ಧ ಹೆಚ್ಚುವರಿ ದೋಷಾರೋಪಣ ಪತ್ರ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ದಿನ ಆರೋಪಿ ಚಂದ್ರಕಾಂತ ಇದ್ದಾರೆ ಎಂದು ಸಾಕ್ಷಿ ನ್ಯಾಯಾಲಯದಲ್ಲಿರುವ ಒಬ್ಬನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಉಳಿದ ಆರೋಪಿಗಳು ನ್ಯಾಯಾಲಯದಲ್ಲಿಲ್ಲ ಆದರೆ ಅವರ ಗುರುತನ್ನು ಅಲ್ಲಗಳೆದಿಲ್ಲ.

**ಪಾಟಿ ಸವಾಲು ಆರೋಪಿತರ ಪರ ಶ್ರೀ ವಿ ಜಿ ಹೆಚ್ ವಕೀಲರಿಂದಃ**

22. ನಾನು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದಾಗ ಅದರ ಜೊತೆಗೆ ಪಂಚನಾಮೆ ಕೂಡ ನ್ಯಾಯಾಲಯಕ್ಕೆ ಕಳುಹಿಸಿಲ್ಲ ಅಂದರೆ ಸರಿ. ದೂರಿನಲ್ಲಿ ಎಲ್ಲೂ ಪಂಚನಾಮೆ ಮಾಡಿದ ಬಗ್ಗೆ ಮತ್ತು ಮುದ್ದೆಮಾಲು ಸ್ವೀಕೃತಿ ಮಾಡಿದ ಬಗ್ಗೆ ನಮೂದು ಮಾಡಿಲ್ಲ ಅಂದರೆ ಸರಿ. ಘಟನಾ ಸ್ಥಳಕ್ಕೆ ನಾನು ಹೋಗಿದ್ದೇನೆ. ಅದು ಸಾರ್ವಜನಿಕ ರಸ್ತೆ ಮತ್ತು ಅದರ ಸುತ್ತಮುತ್ತ ಚರ್ಚ,ಅಂಗಡಿಗಳು ,ಮನೆಗಳು ಇವೆ ಅಂದರೆ ಸರಿ . ಅಲ್ಲಿ ಸುತ್ತ ಮುತ್ತ ಇರುವವರ ಯಾರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಅಂದರೆ ಸರಿ. 1 ಮತ್ತು 2 ನೇ ಆರೋಪಿ ಕೃಷಿ ಕೆಲಸ ಮಾಡುವವರು ಎಂದರೆ ಇರಬಹುದು. 3 ನೇ ಆರೋಪಿ ಕಾಯಿಪಲ್ಲೆ ವ್ಯಾಪಾರ ಮಾಡುವವರು ಇರಬಹುದು. ಅದೇರೀತಿ 4 ನೇ ಆರೋಪಿ ಕೂಡ ಸಣ್ಣಪುಟ್ಟ ಕಾಯಿಪಲ್ಲೆ ಮಾರುವ ವ್ಯಕ್ತಿ ಎಂದರೆ ಇರಬಹುದು. ನಾನು ಸಾಕ್ಷಿದಾರರಾದಚಾಸಾ-2,3,8,9,11 ರಿಂದ 20 ರವರ ಹೇಳಿಕೆ ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅವರುಗಳು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ನಾನು ಆ ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಶಾನೆ ಪಿಃ 31, 32 ಫೋಟೊಗಳಲ್ಲಿ ಪಂಚರ ಮತ್ತು ದೂರುದಾರರ ಸಹಿ ಇಲ್ಲ ಮತ್ತು ಗೆಜೆಟೆಡ್ ಆಫೀಸರ ಸಹಿಯೂ ಇಲ್ಲ ಅಂದರೆ ಸರಿ. ಮುಮಾ-1 ಮತ್ತು 2 ರ ಮೇಲೆ ಕೂಡ ಗೆಜೆಟೆಡ್ ಆಫೀಸರ್ ಸಹಿ ಇಲ್ಲ ಅಂದರೆ ಸರಿ. ಎ ಸಿ ಪಿ ರವರ ಹೇಳಿಕೆ ಪಡೆದುಕೊಂಡಿಲ್ಲ ಆದರೆ ಅವರ ವರದಿ ಪಡೆದುಕೊಂಡಿದ್ದೇವೆ. ಎ ಸಿ ಪಿ ರವರ ವರದಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನ್ಯಾಯಾಲಯಕ್ಕೆ ಕೊಡದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು 2-9-2020 ರಂದು ಪ್ರಾಪರ್ಟಿ ತೆಗೆದುಕೊಂಡು ನಂತರ ಎರಡು ದಿನ ವಿಳಂಬವಾಗಿ ಅದನ್ನು ಎಫ ಎಸ್ ಎಲ್ ಗೆ ಕಳುಹಿಸಿದ್ದೇನೆ ಅಂದರೆ ಸರಿಯಲ್ಲ. ಯಾವುದೇ ಪ್ರಾಪರ್ಟಿ

ಪಡೆದರೆ ಅದನ್ನು ಪ್ರಾಪರ್ಟಿ ರಜಿಸ್ಟರದಲ್ಲಿ ನಮೂದು ಮಾಡಿ ಇಟ್ಟುಕೊಂಡಿರುತ್ತೇವೆ ಅಂದರೆ ಸರಿ. ಪ್ರಾಪರ್ಟಿ ರಜಿಸ್ಟರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಪಿ ಎಫ್ ಮಾತ್ರ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ಮಾಲಖಾನಾ ರಜಿಸ್ಟರ ನಮ್ಮ ಪೋಲಿಸಠಾಣೆಯಲ್ಲಿ ಇರುತ್ತದೆ ಅಂದರೆ ಸರಿ. ಅದರಲ್ಲಿ ಯಾವ ಪ್ರಾಪರ್ಟಿ ಬಂತು ಮತ್ತು ಎಲ್ಲಿಗೆ ಹೋಯಿತು ಎಂದು ನಮೂದಿಸಿರುತ್ತೇವೆ ಅಂದರೆ ಸರಿ. ಈ ಕೇಸನಲ್ಲಿ ಬಂದ ಪ್ರಾಪರ್ಟಿ ಬಗ್ಗೆ ಮಾಲಖಾನಾ ರಜಿಸ್ಟರನಲ್ಲಿ ನಮೂದು ಮಾಡಿದ್ದೇವೆ. ನಾವು ಪಡೆದುಕೊಂಡ ಪ್ರಾಪರ್ಟಿ ಎಷ್ಟು ಗ್ರಾಂ ಇದೆ ಎಂದು ಕೂಡ ಆ ರಜಿಸ್ಟರನಲ್ಲಿ ಬರೆಯುತ್ತೇವೆ. ನಾವು ನ್ಯಾಯಾಲಯಕ್ಕೆ ಯಾವುದೇ ರಜಿಸ್ಟರ ಹಾಜರುಪಡಿಸಿಲ್ಲ ಅಂದರೆ ಸರಿ. ಪಿ ಎಫ್ ನಲ್ಲಿ ನಮೂದಿಸಿದ್ದೇವೆ. ಪಿ ಎಫ್ ಬೇರೆ , ಮಾಲಖಾನ ರಜಿಸ್ಟರ ಬೇರೆ ಅಂದರೆ ಸರಿ. ಆದರೆ ಮಾಹಿತಿ ಒಂದೇ ಇರುತ್ತದೆ. ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ಪಿ ಎಫ್ ಬರೆದಿದ್ದೇವೆ ಅಂದರೆ ಸರಿಯಲ್ಲ.

23. ಗೆಜೆಟೆಡ್ ಆಪೀಸರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನೇ ಗೆಜೆಟೆಡ್ ಆಫೀಸರನ್ನು ಪೋಲಿಸಠಾಣೆಗೆ ಕರೆದುಕೊಂಡು ಬಂದು ಸಹಿ ತೆಗೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಯಾವುದೇ ಪಂಚನಾಮೆಗೆ ಬರಬೇಕಾದರೆ ಅವರು ಅವರ ಮೇಲಾಧಿಕಾರಿಗಳ ಅನುಮತಿ ಪಡೆದು ಮತ್ತು ಮೂವಮೆಂಟ ರಜಿಸ್ಟರನಲ್ಲಿ ಬರೆದು ಬರಬೇಕು ಎಂಬ ಪ್ರಶ್ನೆಗೆ ಸಾಕ್ಷಿ ನಾವು ಅವರಿಗೆ ನೋಟೀಸು ಕೊಟ್ಟು ಬರಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಅವರು ಬರಬೇಕಾದರೆ ಮೂವಮೆಂಟ ರಜಿಸ್ಟರನಲ್ಲಿ ಬರೆದು ಬರಬೇಕು ಎಂದು ಇರಹುದು ಆದರೆ ನಾವು ತಹಶೀಲ್ದಾರ ರವರಿಗೆ ಪತ್ರ ಬರೆದು ಕರೆಸಿಕೊಂಡಿದ್ದೇವೆ. ಗೆಜೆಟೆಡ್ ಆಫೀಸರ ಬಂದ ಬಗ್ಗೆ ಮೂಮೆಂಟ ರಜಿಸ್ಟರ ನಾನು ಹಾಜರುಪಡಿಸಿಲ್ಲ ಅಂದರೆ ಸರಿ. ನಾವು ಪ್ರಾಪರ್ಟಿ ತೆಗೆದುಕೊಂಡು 2 ದಿನ ನಂತರ 4 ನೇ ತಾರೀಕು ಸೆಂಟ್ರಲ್ ಬ್ಯೂರೋ ಆಫ್ ಡ್ರಗ್ಸ ರವರಿಗೆ ಈ ಮೇಲ್ ಕಳುಹಿಸಿದ್ದೆವು ಅಂದರೆ ಸರಿ. ದಿಃ 5-9-2020 ಕ್ಕೆ ಕೆಮಿಕಲ್ ಎಕ್ಸಾಮಿನೇಶನಗೆ ಅದನ್ನು ಕಳುಹಿಸಿದೆವು ಅಂದರೆ ಸರಿ. ಉಳಿದ ಮುದ್ದೆಮಾಲುಗಳು ಎನಾಯಿತು ಎಂದು ವಿವರಣೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಆರೋಪಿ 1 ಮತ್ತು 2 ಯಾವುದೇ ತಪ್ಪ

ಮಾಡಿಲ್ಲ ಆದರೂ ಅವರ ಮೇಲೆ ಸುಳ್ಳು ಕೇಸು ಹಾಕಿದ್ದೇನೆ ಅಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಆರೋಪಿಗಳಿಗೂ ಸಂಬಂಧ ಇಲ್ಲ ಅದರೂ ಸುಳ್ಳು ಕೇಸು ಹಾಕಿದ್ದೇನೆ ಅಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿ , ಅದೇರೀತಿ 2 ಮತ್ತು 3 ನೇ ಆರೋಪಿ ,3 ಮತ್ತು 4 ನೇ ಆರೋಪಿತರಿಗೆ ಒಬ್ಬರಿಗೊಬ್ಬರಿಗೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಕಥೆ ಸೃಷ್ಟಿಸಿ 4 ಮಂದಿಯ ಮೇಲೆ ಕೇಸು ಹಾಕಿದ್ದೇನೆ ಅಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿ ಸ್ವಖುಷಿ ಹೇಳಿಕೆ ಕೊಟ್ಟರು ಎಂದು ನಾನು ಸೃಷ್ಟಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚರ್ಚ ಸಮೀಪ ಕಸದಲ್ಲಿ ಒಂದು ಮೊಬೈಲ ಪೋನ ಇತ್ತು ಅದನ್ನು ನಾನು ಪಂಚನಾಮೆ ಮೂಲಕ ವಶಪಡಿಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿ 3 ನೇ ಆರೋಪಿಯಿಂದ ಗಾಂಜಾ ತೆಗೆದುಕೊಂಡೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ವ ಖುಷಿ ಹೇಳಿಕೆಗಳನ್ನು ನಾನೇ ಸೃಷ್ಟಿ ಮಾಡಿ ಬರೆದಿದ್ದೇನೆ ಅಂದರೆ ಸರಿಯಲ್ಲ. ನಾನು ಪೋಲಿಸಠಾಣೆಯಲ್ಲಿ ಕುಳಿತು ನಿಶಾನೆ ಪಿಃ 43 ಪಂಚನಾಮೆ ಸೃಷ್ಟಿ ಮಾಡಿ ಸಹಿ ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ನಿಶಾನೆ ಪಿಃ 7 1 ಮತ್ತು 2 ನೇ ಆರೋಪಿಗೆ ಸಂಬಂದಪಟ್ಟಿದ್ದಲ್ಲ ಅಂದರೆ ಸರಿಯಲ್ಲ. ನಾನು ಈ ಕೇಸಗಾಗಿ ಅದನ್ನು ಸೃಷ್ಟಿಸಿ ಅಳವಡಿಸಿದ್ದೇನೆ ಅಂದರೆ ಸರಿಯಲ್ಲ. ಯಾವುದೇ ದೂರು ಬಂದರೆ ಎಸ್ ಎಚ್ ಡಿ ಯಲ್ಲಿ ನಮೂದಿಸುತ್ತೇವೆ. ಎಲ್ಲಾದರೂ ದಾಳಿಗೆ ಹೋಗಬೇಕಾದರೆ ರಜಿಸ್ಟರದಲ್ಲಿ ನಮೂದು ಮಾಡಿ ಎಷ್ಟು ಜನ ಹೋಗುತ್ತಿದ್ದೇನೆ ಎಂದು ನಮೂದು ಮಾಡಿ ಹೋಗುತ್ತೇವೆ ಅಂದರೆ ಸರಿಯಲ್ಲ. ಕೆಲವು ಸಲ ಸಮಯ ಸಿಗುವುದಿಲ್ಲ ಆದ್ದರಿಂದ ನಮೂದು ಮಾಡುವುದಿಲ್ಲ. ಆ ರೀತಿ ಮಾಡಲು ಸಮಯ ಸಿಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬಂದ ಮೇಲೆ ಕೂಡ ಎಸ್ ಎಚ್ ಡಿ ಯಲ್ಲಿ ಕಂಪ್ಲೆಂಟ ತೆಗೆದುಕೊಂಡ ಬಗ್ಗೆ ಬರೆಯಬೇಕು ಅಂದರೆ ಸರಿಯಲ್ಲ. ಆದರೆ ಎಫ್ ಐ ಆರ್ ಆದ ಮೇಲೆ ಅದನ್ನು ಎಸ್ ಎಚ್ ಡಿ ಯಲ್ಲಿ ನಮೂದಿಸುತ್ತೇವೆ. ನನಗೆ 15-9-2020 ರಂದು 3 ನೇ ಆರೋಪಿ ಇರುವ ಬಗ್ಗೆ ಮಾಹಿತಿ ಬಂತು ಎಂದು ಹೇಳಿರುವುದನ್ನು ಎಸ್ ಎಚ್ ಡಿ ಯಲ್ಲಿ ನಮೂದಿಸಿಲ್ಲ. ನಾನುಮತ್ತು ಪಂಚರು ಎಲ್ಲ ಸೇರಿ ಮಾಹಿತಿ

ಬಂದ ಸ್ಥಳಕ್ಕೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಶಾನೆ ಪಿಃ 87 ನಾನೇ ಸೃಷ್ಟಿ ಮಾಡಿ ಕೇಸಗೆ ಅನುಕೂಲವಾಗಲಿ ಎಂದು ತಯಾರು ಮಾಡಿದ್ದೇನೆ ಅಂದರೆ ಸರಿಯಲ್ಲ.

24. ನಾನು ಮಹಮ್ಮದ ಇಸ್ಮಾಯಿಲ ಮತ್ತು ಚಂದ್ರಕಾಂತ ಕಿರೇಸೂರ ರವರಿಗೆ ಪಂಚರಾಗಿ ಎಂದು ನೋಟೀಸು ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 15-6-2020 ರಂದು ಮೌಖಿಕವಾಗಿ ಇನಫರ್ಮೆಶನ ಬಂದ ಮೇಲೆ ಮೌಖಿಕವಾಗಿ ಮತ್ತು ಲಿಖಿತವಾಗಿ ನಮ್ಮ ಎ ಸಿ ಪಿ ರವರಿಗೆ ತಿಳಿಸಿದ್ದೇನೆ. ಮೌಖಿಕವಾಗಿ ಮತ್ತು ಬರವಣಿಗೆಯಲ್ಲಿ ಆ ರೀತಿ ತಿಳಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎ ಸಿ ಪಿ ರವರ ಹೇಳಿಕೆ ಮತ್ತು ವರದಿ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಅವರ ಅನುಮತಿ ಪಡೆದುಕೊಂಡು ಹೋಗಿರುತ್ತೇನೆ. ಪೋಲೀಸ ವೆಹಿಕಲ್ ಲಾಗ್ ಬುಕ್ ಬರೆಯಬೇಕು ಅಂದರೆ ಸರಿ. ನಾನು ಲಾಗಬುಕ್ ಕಾಪಿ ಹಾಜರುಪಡಿಸಿಲ್ಲ ಅಂದರೆ ಸರಿ. , ಎಸ್ ಎಚ್ ಡಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

25. ದಿಃ 15-9-2020 ರಂದು ಸೀಮೆ ಕಾವಲಮ್ಮನ ಗುಡಿ ಹತ್ತಿರ ನಾವು ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ ನಾವು ವಾಚ್ ಮಾಡುತ್ತಿದ್ದಾಗ ಒಂದು ಕಾರ ಬಂತು , ಆ ಕಾರನ್ನು ನಾವು ನಿಲ್ಲಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕಾರು ನಿಲ್ಲಿಸಿದ ಮೇಲೆ 3 ನೇ ಆರೋಪಿ ಓಡಲು ಪ್ರಯತ್ನ ಪಟ್ಟ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ 3 ನೇ ಆರೋಪಿ ತನ್ನ ಹೆಸರು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ನಮ್ಮ ಅಂಗ ಶೋಧನೆ ಮಾಡಿಕೊಂಡಿದ್ದೇವೆ ಆದರೆ ಅದನ್ನು ಪಂಚನಾಮೆಯಲ್ಲಿ ಹೇಳಿಲ್ಲ. ಆರೋಪಿಯನ್ನು ಹಿಡಿದಾಗ ಅಂಗ ಶೋಧನೆ ಮಾಡುವ ಮುಂಚೆ ಗೆಜೆಟೆಡ್ ಆಫೀಸರ್ ಅಥವಾ ನಾವೆ ಸರ್ಚ ಮಾಡಬಹುದಾ ಎಂದು ಅವರಿಗೆ ಕೇಳಿದಿರಾ ಎಂಬ ಪ್ರಶ್ನೆಗೆ ಸಾಕ್ಷಿ 3 ನೇ ಆರೋಪಿಯೇ ನನ್ನ ಬಳಿ ಗಾಂಜಾ ಇದೆ ಎಂದು ತೆಗೆದು ತೋರಿಸಿದ ಎಂದು ಉತ್ತರಿಸಿರುತ್ತಾರೆ. ಆರೋಪಿ ತನ್ನ ಕಡೆ ಗಾಂಜಾ ಇತ್ತು ಎಂದು ಹೇಳಿದ ಎಂದು ಪಂಚನಾಮೆ ಮತ್ತು ಪಿಸಿ ದನಿಗೊಂಡ ರವರ ಹೇಳಿಕೆಯಲ್ಲಿ ನಮೂದಿಸಿಲ್ಲ

ಅಂದರೆ ಸರಿಯಲ್ಲ. ಆರೋಪಿಗೆ ಲಿಖಿತವಾಗಿ ಗೆಜೆಟೆಡ್ ಆಫಿಸರ ಮುಂದೆ ಮಾಡಬೇಕೋ ನಾವೆ ಸರ್ಚ ಮಾಡಬೇಕೋ ಎಂದು ಪತ್ರ ಕೊಟ್ಟಿಲ್ಲ. ಅಲ್ಲಿ ವೋಕ್ಸವೊಗನ ಕಾರ ಎಂ ಎಚ್ -11-ಎ ಎಂ -2345 ಸಿಕ್ಕಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ ಪಂಚನಾಮೆ ಮಾಡಿದಾಗ 1 ಕೆ ಜಿ 10 ಗ್ರಾಂ ಗಾಂಜಾ ಸಿಕ್ಕಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾಂಜಾ ವಶಪಡಿಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಶಾನೆ ಪಿಃ 59 ರ ಪ್ರಕಾರ ಪಂಚನಾಮೆ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲಿಸಠಾಣೆಯಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ ಪಂಚನಾಮೆ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಶಾನೆ ಪಿಃ 60 ರಿಂದ 73 ಫೋಟೊಗಳನ್ನು ಅಲ್ಲೆ ತೆಗದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-11,12 ,13 ರವರ ಮತ್ತು ಬೀರಣ್ಣ , ರೇಣು ಸಿಕ್ಕಲಗಾರ ರವರ ಹೇಳಿಕೆಗಳನ್ನು ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 3 ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಆದರೂ ಅವನನ್ನು ಸುಮ್ಮ ಸುಮ್ಮನೆ ಅರೆಸ್ಟ ಮಾಡಿದ್ದೇವೆ ಅಂದರೆ ಸರಿಯಲ್ಲ.

26. ಅದೇರೀತಿ 3 ನೇ ಆರೋಪಿ ನಮ್ಮ ಮುಂದೆ ಹೇಳಿಕೆ ಕೊಟ್ಟು , 4 ನೇ ಆರೋಪಿಯಿಂದ ಗಾಂಜಾ ಖರೀದಿ ಮಾಡುತ್ತಿದ್ದೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿಃ 23-10-2020 ರಂದು ಗಾಂಜಾ ಆರ್ ಎಫ್ ಎಸ್ ಎಲ್ ಗೆ ಕಳುಹಿಸಿದೆ ಅಂದರೆ ಸರಿ. ವಶಪಡಿಸಿಕೊಂಡ ಗಾಂಜಾ ಎಲ್ಲಿ ಇಟ್ಟಿದ್ದೆ ಎನ್ನುವ ಬಗ್ಗೆ ಎಲ್ಲೂ ವಿವರಣೆ ಕೊಟ್ಟಿಲ್ಲ ಅಂದರೆ ಸರಿ.

27. ದಿಃ 9-10-2020 ರಂದು 3 ನೇ ಆರೋಪಿ ಅಬ್ದುಲರಜಾಕ ಈತನಿಗೆ ಗಾಂಜಾ ನೀಡುತ್ತಿದ್ದ ಆರೋಪಿ ಚಂದ್ರಕಾಂತ ಅಲಿಯಾಸ್ ಪಕ್ರು ತಂದೆ ಹರಿಶ್ಚಂದ್ರ ಚವ್ಹಾಣ ಈತನು ಬೆಂಗಳೂರಿನ ಶೇಷಾದ್ರಿಪುರಮ ಪೋಲಿಸಠಾಣೆ ಗುನ್ಹಾ ಸಂಃ 57/2020 ರಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದು ಬಾಡಿ ವಾರಂಟಗಾಗಿ ವಿನಂತಿ ಮಾಡಿಕೊಂಡಿರುತ್ತೇನೆ, ದಿಃ 20-10-2020 ರಂದು ಸದರ ಪ್ರಕರಣದ ಆರೋಪಿತರ ತಾಬಾದಲ್ಲಿ ಸ್ಯಾಂಪಲ ಕುರಿತು ಉಳಿದ ಎಲ್ಲ ಗಾಂಜಾ ಇನವೆಂಟರಿ

ಮಾಡಿಸಿ ಆ ಸಮಯದಲ್ಲಿ ಫೋಟೊ ತೆಗೆಸಿದ್ದೇನೆ ಮತ್ತು ಆ ಫೋಟೊಗಳನ್ನು ನಿಶಾನೆ ಪಿಃ 97 ರಿಂದ 112 , ದಿ 23-10-2020 ರಂದು ಪಿ ಸಿ 2492 ಉಮೇಶ ರವರು ಆರ್ ಎಫ್ ಎಸ್ ಎಲ್ ಧಾರವಾಡದಿಂದ ಗಾಂಜಾ ಪ್ರಮಾಣಪತ್ರ ಅಂದರೆ ಎಫ್ ಎಸ್ ಎಲ್ ವರದಿ ತಂದು ಹಾಜರುಪಡಿಸಿದ್ದು ಅದನ್ನು ಕಡತದಲ್ಲಿ ಅಳವಡಿಸಿರುತ್ತೇನೆ, ಅದು ನಿಶಾನೆ ಪಿಃ 79 ಎಂದು , ದಿಃ 27-10-2020 ರಂದು ಮಾನ್ಯ ಸಹಾಯಕ ಇಂಜಿನೀಯರ ಪಿ ಡಬ್ಲು ಡಿ ಹುಬ್ಬಳ್ಳಿ ರವರಿಗೆ ಗುನ್ನಾ ಜಾಗದ ಹಾತ ನಕಾಶೆಗಾಗಿ ಕೋರಿಕೊಂಡಿರುತ್ತೇನೆ. ದಿಃ 29-10-2020 ರಂದು ಮಾರುತಿ ಹರಿಣಶಿಕಾರಿ , ಚಂದಪ್ಪ ಹರಿಣಶಿಕಾರಿ ಮತ್ತು ಅಬ್ದುಲರಜಾಕ ( 1 ರಿಂದ 3 ನೇ ಆರೋಪಿ ) ಇವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ, ಆಗ ನಾನು ಎಸ್ ಎಚ್ ಡಿ ಕೂಡ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ , ಅವುಗಳು ನಿಶಾನೆ ಪಿಃ 113 ಮತ್ತು 114 ಎಂದು , ನಮಗೆ ಸಿಕ್ಕ ಗಾಂಜಾ ಬಗ್ಗೆ ಫಾರ್ಮ ಎಫ್ ಮೊದಲೇ ಕಳುಹಿಸಿರುತ್ತೇನೆ. ಅದು ನಿಶಾನೆ ಪಿಃ 83 ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

28. ದಿಃ 15-9- 2020 ರಂದು ವಶಪಡಿಸಿಕೊಂಡ 1500 ರೂ ಈಗಾಗಲೇ ಮುಮಾ-10 ಎಂದು , ಅದೇರೀತಿ ಒಂದು ಸ್ಯಾಮಸಂಗ್ ಮೊಬೈಲ ಮುಮಾ-9 ಎಂದು , ಆದಿನ ವಶಪಡಿಸಿಕೊಂಡ ಕಾರಿನ ಫೋಟೊಗಳನ್ನು ನಿಶಾನೆ ಪಿಃ 60 ರಿಂದ 73 ಎಂದು , 1 ಮತ್ತು 2 ನೇ ಆರೋಪಿ ಕಡೆಯಿಂದ ವಶಪಡಿಸಿಕೊಂಡ ಬೈಕು , ರೆಡ್ ಮಿ ಕಂಪನಿಯ ಮೊಬೈಲ, ಹಳದಿಬಣ್ಣದ ಕ್ಯಾರಿಬ್ಯಾಗ .,ಕಪ್ಪು ಬಣ್ಣದ ಬ್ಯಾಗ , ರೂ1000 ನೋಡಿದರೆ ಗುರುತಿಸಬಲ್ಲೆ ಎಂದು , ರೂ1000 ಮುಮಾ-6 ಎಂದು , ಹಳದಿ ಬಣ್ಣದ ಕ್ಯಾರಿಬ್ಯಾಗ ಮುಮಾ-5 ಎಂದು , ರೆಡ್ ಮಿ ಮೊಬೈಲ ಈಗಾಗಲೇ ಮುಮಾ-7 ಎಂದು , ಕಪ್ಪು ಬಣ್ಣದ ಕಾಲೇಜ ಬ್ಯಾಗ ಮುಮಾ-4 ಎಂದು , ಸಾಕ್ಷಿ ಆ ಬೈಕ ಫೋಟೊಗಳನ್ನು ನಿಶಾನೆ ಪಿಃ 38 ರಿಂದ 41 ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

29. ದಿಃ 24-12-2020 ರಂದು 4 ನೇ ಆರೋಪಿ ಚಂದ್ರಕಾಂತ ಚವ್ಹಾಣ ಈತನನ್ನು ನ್ಯಾಯಾಲಯದಿಂದ 5 ದಿನಕ್ಕೆ ಕಸ್ಟಡಿಗೆ ತೆಗೆದುಕೊಂಡು ತನಿಖೆ ಮಾಡಿರುತ್ತೇನೆ, ದಿಃ 25-12-2020

ರಂದು ಮಾರನೇ ದಿನ ಇಬ್ಬರು ಪಂಚರಾದ ಸಂಗಮೇ ಪಕ್ಕೀರಪ್ಪ ಸವದಿ , ರಘುನಾಥ ಪಕ್ಕೀರಪ್ಪ ಕಮತರ ಇವರ ಸಮಕ್ಷಮ 3 ನೇ ಆರೋಪಿತನಿಗೆ 4 ನೇ ಆರೋಪಿತನು ಗಾಂಜಾ ತಂದು ಕೊಡುತ್ತಿದ್ದ ಗುಲಬರ್ಗಾ ಹೈವೆ ಜಾಗದಲ್ಲಿ 4 ನೇ ಆರೋಪಿತನು ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಫೋಟೊ ತೆಗೆದು ಪಂಚನಾಮೆ ಮಾಡಿರುತ್ತೇನೆ, ಆ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ, ಆ ದಿನ ಮಾಡಿದ ಪಂಚನಾಮೆ ನಿಶಾನೆ ಪಿಃ 75 ಎಂದು ಗುರುತಿಸಾಗಿದೆ. ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 75 (ಬಿ ) ಎಂದು, ಆ ಸಮಯದಲ್ಲಿ ತೆಗೆದ ಫೋಟೊಗಳು ನಿಶಾನೆ ಪಿಃ 76 ಮತ್ತು 77 ಎಂದು ,ಆ ಪಂಚನಾಮೆಯನ್ನು ಬೆಳಿಗ್ಗೆ 11 ಘಂಟೆಯಿಂದ 11.45 ಘಂಟೆ ನಡುವೆ ಜರುಗಿಸಿರುತ್ತೇನೆ ಎಂದು, ನಂತರ ವಾಪಸು ಠಾಣೆಗೆ ಬಂದು ಸಿಬ್ಬಂದಿಗಳಾದ ಎಚ್ ಸಿ 1563 ಎಚ್ ಸಿ ಪಾಂಡೆ , 1628 ಎಂ ಬಿ ದನಿಗೊಂಡ , 1676 ಎಂ ವಾಯ್ ಅಂಗಡಿ , ಸಿಪಿಸಿ 2300 , ಸಿಪಿಸಿ 3030 ,ಸಿಪಿಸಿ 2717 ಹಾಗೂ ರಮೇಶ ಫಕ್ಕೀರಪ್ಪ ಅಮ್ಮಿನಬಾವಿ , ಚಂದ್ರಕಾಂತ ಯಮನಪ್ಪ ಕಿರೇಸೂರ , ಮಹಮ್ಮದ ಇಸ್ಮಾಯಿಲ್ ದುಕಾನದಾರ ರವರಿಗೆ 4 ನೇ ಆರೋಪಿ ಚಂದ್ರಕಾಂತನನ್ನು ತೋರಿಸಿ ಪುನಃ ಹೇಳಿಕೆಗಳನ್ನು ಪಡೆದುಕೊಂಡೆನು, ಮಹಮ್ಮದ ಇಸ್ಮಾಯಿಲ ದುಕಾನದಾರ ರವರು ನನ್ನ ಮುಂದೆ ನಿಶಾನೆ ಪಿಃ 74 ರಂತೆ ಹೇಳಿಕೆ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯ ಸ್ವಯಂ ಹೇಳಿಕೆಯನ್ನು ದಾಖಲು ಮಾಡಿಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ, ನಂತರ ಅವನನ್ನು ಮಾರನೇ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ದಿಃ 3-2-2021 ರಂದು ಪಿ ಡಬ್ಲು ಡಿ ಹುಬ್ಬಳ್ಳಿ ರವರು ಗುನ್ನಾ ಜಾಗೆಯ ಹಾತನಕಾಶೆಯನ್ನು ನೀಡಿರುತ್ತಾರೆ ಅದು ನಿಶಾನೆ ಪಿಃ 115 ಎಂದು , ನಿಶಾನೆ ಪಿಃ 78 ಹೆಸ್ಕಾಂ ವರದಿ ನಾನು ದಿಃ 14-10-21 ರಲ್ಲಿ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

30. 3 ನೇ ಆರೋಪಿಯಿಂದ ವಶಪಡಿಸಿಕೊಂಡ ಸ್ಯಾಂಪಲನ್ನು ಎಫ ಎಸ್ ಎಲ್ ಗೆ ಕಳುಹಿಸಿದ್ದೇನೆ, ಅದರ ವರದಿಯನ್ನು ದಿಃ 23-10-2020 ರಂದು ಪಡೆದುಕೊಂಡಿರುತ್ತೇನೆ , ಆ ವರದಿ

ನಿಶಾನೆ ಪಿಃ 80 ಎಂದು , 3 ನೇ ಆರೋಪಿಯಿಂದ ವಶಪಡಿಸಿಕೊಂಡ ವಸ್ತುವನ್ನು ಮುಮಾ-8 ಎಂದು , ದಿಃ 11-9-2021 ರಂದು 915010030107054 ಮತ್ತು 919010013779845 ರ ಬ್ಯಾಂಕ ಸ್ಟೇಟಮೆಂಟ ನೀಡಲು ಎಕ್ಸಿಸ್ ಬ್ಯಾಂಕ ಹುಬ್ಬಳ್ಳಿ ಬ್ರಾಂಚ್‌ಗೆ ಮನವಿ ಮಾಡಿಕೊಂಡಿರುತ್ತೇನೆ ಅದು ನಿಶಾನೆ ಪಿಃ 116 ಎಂದು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎಕ್ಸಿಸ್ ಬ್ಯಾಂಕನವರು ಅವರೆಡೂ ಅಕೌಂಟಗಳ ಬಾಂಕ ಸ್ಟೇಟಮೆಂಟ ನೀಡಿರುತ್ತಾರೆ, ಅವುಗಳು ನಿಶಾನೆ ಪಿಃ 117 ಮತ್ತು 118 ಎಂದು 915010030107054 ಅಕೌಂಟ ಬಲಭೀಮ ಎನ್ನುವವರದಾಗಿದ್ದು, ಅದೇರೀತಿ 919010013779845 ಅಕೌಂಟ ನಂಬರ ಆರೋಪಿ ಚಂದ್ರಕಾಂತ ಗೆ ಸೇರಿದ್ದಾಗಿರುತ್ತದೆ, ಗಾಂಜಾ ತೆಗೆದುಕೊಳ್ಳಲು ಆರೋಪಿ -3 ಅಬ್ದುಲ ರಜಾಕ ರವರು ಬೇರೆ ಬೇರೆ ಹೆಸರಿನಿಂದ ಈ ಎರಡೂ ಅಕೌಂಟಗೆ ದುಡ್ಡು ಹಾಕುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

31. 4 ನೇ ಆರೋಪಿ ಫೋಟೊ ಮತ್ತು ಅವರ ಬ್ಯಾಂಕ ಡಿಟೇಲ ವರದಿ ನಿಶಾನೆ ಪಿಃ 119 ಎಂದು ,. ಅದೇರೀತಿ ಬಲಭೀಮಗೆ ಸಂಬಂದಪಟ್ಟ ವರದಿಯನ್ನು ಎಕ್ಸಿಸ್ ಬ್ಯಾಂಕನವರು ನೀಡಿದ್ದು ಅದು ನಿಶಾನೆ ಪಿಃ 120 ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

32. ದಿಃ 14-10-2021 ರಂದು ಹೆಸ್ಕಾಂ ಹುಬ್ಬಳ್ಳಿ ರವರು ದಿಃ 2-9-2020 ರಂದು ಸಂಜೆ 6 ಘಂಟೆಯಿಂದ ರಾತ್ರಿ 8 ಘಂಟೆ ವರೆಗೆ ಅಸೆನ್ಸನ್ ಚರ್ಚ ಹತ್ತಿರ ಇರುವ ಕಚ್ಚಾ ರಸ್ತೆಯಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ಕೇಳಿದ್ದು ಅವರು ಆ ಅವಧಿಯಲ್ಲಿ ಯಾವುದೇ ವಿದ್ಯುತ್ ವ್ಯತ್ಯಯ ಕುರಿತು ಫ್ಯೂಜ್ ಆಫ ಕಾಲ್ ರಜಿಸ್ಟರನಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ ಎಂದು ನಿಶಾನೆ ಪಿಃ 78 ರಂತೆ ವರದಿ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

33. ಶಿಶುನಾಳ ಎಂಬ ಊರು ಹಾವೇರಿ ಜಿಲ್ಲಾ ಶಿಗ್ಗಾವ ತಾಲೂಕಿನಲ್ಲಿದೆ ಅಂದರೆ ಸರಿ. 1 ರಿಂದ 4 ನೇ ಆರೋಪಿತರ ಬಳಿ ಯಾವುದೇ ಫೋನ , ದುಡ್ಡು ಗಾಂಜಾ ಸಿಕ್ಕಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿತರ ಮೇಲೆ ಯಾವುದೇ ಸಾಕ್ಷಿ ಇಲ್ಲದಿದ್ದರೂ

ಕೂಡ ನಾನು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರಿಗೆ ಕೂಡ ಗೆಜೆಟೆಡ್ ಆಫೀಸರ ಮುಂದೆ ಸರ್ಚ ಮಾಡಬೇಕೋ ಬೇಡ ಎಂದು ನೋಟೀಸು ಕೊಟ್ಟಿಲ್ಲ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಸಂಗತಿಗಳು ಸುಳ್ಳು ಅಂದರೆ ಸರಿಯಲ್ಲ. ಕೇಸನಲ್ಲಿರುವ ಮುದ್ದೆಮಾಲುಗಳನ್ನು ಸೃಷ್ಟಿಸಿ ಕೇಸಗಾಗಿ ಅಳವಡಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**( ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

<u>ಎನ್.ಡಿ.ಪಿ.ಎಸ್. ಸಂಖ್ಯೆ: **7/2020**</u>

<u>ಫ್ರಾಸಾ.**13**</u>

<u>ಎನ್.ಡಿ.ಪಿ.ಎಸ್. ಸಂಖ್ಯೆ 7/2020</u>

<u>ಫ್ರಾಸಾ.13</u>